KAUK910003092025

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಸಿದ್ದಾಪುರ

ಸಿ.ಸಿ.130/2025

ಫಿರ್ಯಾದಿಃ **ಸೆಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್, ಕಾರವಾರ, ಸಿದ್ದಾಪುರ ಬ್ರಾಂಚ್, ಸಿದ್ದಾಪುರ**

-ವಿರುದ್ಧ-

ಆರೋಪಿಃ **ಶ್ರೀ .ಜಾಫರ್ ಸಾಧೀಕ್ ರಹೀಮ್ ಸಾಬ,**
**ವಯಸ್ಸುಃ ಪ್ರಯಾಪ್ತ, ಉದ್ಯೋಗಃ ವ್ಯಾಪಾರ,**
**ವಾಸಃ ಹಾರ್ಸಿ ಕಟ್ಟಾ, ಸಿದ್ದಾಪುರ ತಾಲೂಕು. ಉ,ಕ.,**

ನಾನು **ಶ್ರೀ ಉಮೇಶ. ಎಮ್.ಪಿ. ಬಿ.ಎ.ಎಲ್., ಎಲ್.ಎಲ್.ಬಿ.,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ದಾಪುರ ಆದ ನಾನು, ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

### ಆಪಾದನೆ

ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರರು ಸೆಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್, ಸಂಸ್ಥೆಯು, ಕರ್ನಾಟಕ ಸೌಹಾರ್ದಾ ಕೋ-ಆಪರೇಟಿವ್ ಕಾಯ್ದೆ ರಡಿಯಲ್ಲಿ ನೊಂದಾಯಿತ ಸಂಸ್ಥೆಯಾಗಿದ್ದು ಹಣಕಾಸು ವ್ಯವಹಾರ, ಅಗತ್ಯವಿರುವವರಿಗೆ ಹಣವನ್ನು ಸಾಲವಾಗಿ ನೀಡುವ ಸೌಹಾರ್ದ ಸಹಕಾರಿ ಸಂಸ್ಥೆಯಾಗಿದ್ದು, ಆರೋಪಿತನಾದ ನೀನು ಫಿರ್ಯಾದುದಾರರ ಸಹಕಾರಿ ಸಂಸ್ಥೆಯಲ್ಲಿ ಸಾಲಕ್ಕಾಗಿ ಮನವಿ ಮಾಡಿದ್ದು, ನಂತರ ದಿನಾಂಕ 07.03.2022 ರಂದು ರೂ. 1,85,000/- ಗಳನ್ನು ಸಾಲ ಪಡೆದಿದ್ದು, ಸಾಲಕ್ಕಾಗಿ ನೀನು ಎಲ್ಲಾ ದಾಖಲಾತಿ ಮತ್ತು ಅಗ್ರಿಮೆಂಟ್ ಮಾಡಿದ್ದು ಹಾಗೂ ಉಮಾಪತಿ ಮಹಾಬಲೇಶ್ವರ ಮತ್ತು ಶ್ರೀ ಮುಸಾಧೀಕ್ ಅಬ್ದುಲ್ ಸಾಬ ಎನ್ನುವವರನ್ನು ಶ್ಯೂರಟೀಯಾಗಿಸಿದ್ದು, ಆರೋಪಿತನಾದ ನೀನು ಸಾಲದ ಕಂತುಗಳನ್ನು ಸರಿಯಾಗಿ ಪಾವತಿ ಮಾಡದೆ ಇದ್ದು, ಸದರಿ ಸಾಲದ ಈಗಿನ ಬಾಕಿ ಮೊತ್ತವು ರೂ.1,99,678/- ಆಗಿದ್ದು ಹಾಗೂ ಫಿರ್ಯಾದುದಾರರ ಸಂಸ್ಥೆಯು ಹಲವು ಬಾರಿ ಸಾಲದ ಮರುಪಾವತಿಗಾಗಿ ಬೇಡಿಕೆ ಇಟ್ಟಿದ್ದು, ಸದರಿ ಸಾಲದ ಬಾಬ್ತಿಗಾಗಿ ದಿನಾಂಕ

**KAUK**910003092025

06.03.2025 ಕೆನರಾ ಬ್ಯಾಂಕ್, ಸಿದ್ದಾಪುರ ಶಾಖೆಯ ಚೆಕ್ಕಿನ ಸಂಖ್ಯೆ 259901 ನ ರೂ.1,99,678/- ನ ಚೆಕನ್ನು ನೀಡಿದ್ದು, ತದನಂತರ ಸಹಕಾರಿ ಸಂಸ್ಥೆಯು ಸದರಿ ಚೆಕನ್ನು ನಗದು ಗೊಳಿಸಲು ಕೆ.ಡಿ.ಸಿ.ಸಿ ಬ್ಯಾಂಕ್, ಸಿದ್ದಾಪುರ ಶಾಖೆಗೆ ಹಾಕಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದ ಕಾರಣ ದಿಃ 10.03.2025 ರಂದು "**Funds Insufficient**" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ದಿಃ 18.03.2025 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸನ್ನು ದಿನಾಂಕ: 25.03.2025 ರಂದು ಪಡೆದಿದ್ದರೂ ನೀನು ಹಣವನ್ನು ಸಹ ಮರುಪಾವತಿ ಮಾಡದೇ **ಏನ್ ಆಯ್ ಆಕ್ಟ, 138** ರ ಅಡಿಯಲ್ಲಿ ಅಫರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ಆರೋಪಣೆಗೆ ನೀನು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆಃ 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ಆರೋಪಣೆ ತಿಳಿಯಿತೆ ?
**ಉತ್ತರಃ**

ಪ್ರಶ್ನೆಃ 2. ನೀನು ಈ ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ಧ ವಿಚಾರಣೆ ನಡೆಯಬೇಕೆ?
**ಉತ್ತರಃ**

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **04-08-2025** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ.,ಸಿದ್ದಾಪುರ.**